# ಲಕ್ಷ್ಯ ಸೇನ್ ಚಿನ್ನದ ಹೂ




**ಹನ್ನೆರಡು ವರ್ಷಗಳಿಂದ ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ ಉತ್ತರಾಖಂಡದ ಲಕ್ಷ್ಯ ಸೇನ್ ಎಂಬ ಯುವ ಪ್ರತಿಭೆ 'ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ'ಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆರು ವರ್ಷಗಳ ಬಳಿಕ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟಿದ್ದಾರೆ. ಜೂನಿಯರ್ ಹಂತದಲ್ಲಿ ವಿಶ್ವ ರ್‍ಯಾಂಕ್‌ನಲ್ಲಿ ನಂ 1 ಪಟ್ಟ ಪಡೆದಿದ್ದ ಅವರು, ಈಗ ಸೀನಿಯರ್‌ನಲ್ಲಿ ವಿಶ್ವದ ಅಗ್ರರ್‍ಯಾಂಕ್ ಆಟಗಾರ ಸಿಂಗಪುರದ ಲೊಹ್ ಕೀನ್ ಯಿವ್ ಎದುರು ಪ್ರಾಬಲ್ಯ ಮೆರೆದಿದ್ದಾರೆ. ಈ ಸಾಧನೆ 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 'ಚಿನ್ನದ ಹೂ' ಅರಳಿಸುವ ಆಸೆಗೆ ಬಲ ತುಂಬಿದೆ.**

■ ಪ್ರಮೋದ

ಅಂತರರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ನಿರಂತರವಾಗಿ ಪದಕಗಳನ್ನು ಜಯಿಸುತ್ತ ಸಾಗುತ್ತಿರುವ 20 ವರ್ಷದ ಲಕ್ಷ್ಯ ಸೇನ್ ಎಂಬ ನಕ್ಷತ್ರ ಭಾರತದ ಬ್ಯಾಡ್ಮಿಂಟನ್ ಆಗಸದಲ್ಲಿ ಹೊಸ ಭರವಸೆಯ ಬೆಳಕು ಮೂಡಿಸಿದೆ.

ದಶಕದ ಹಿಂದೆ ಬ್ಯಾಡ್ಮಿಂಟನ್ ಎಂದರೆ ಚೀನಾ, ಜಪಾನ್, ಸಿಂಗಪುರ, ಕೊರಿಯಾ, ಇಂಡೊನೇಷ್ಯಾ, ಡೆನ್ಮಾರ್ಕ್, ಥಾಯ್ಲೆಂಡ್, ಮಲೇಷ್ಯಾ, ಚೀನಾ ತೈಪೆಯಿ ಆಟಗಾರರ ಸಾಧನೆಗಳು ನೆನಪಾಗುತ್ತಿದ್ದವು. ಈ ರಾಷ್ಟ್ರಗಳು ಕಟ್ಟಿದ್ದ ಸಾಧನೆಯ ಭದ್ರಕೋಟೆಯೊಳಗೆ ನುಗ್ಗುವುದೇ ಭಾರತದ ಸ್ಪರ್ಧಿಗಳಿಗೆ ದೊಡ್ಡ ಸವಾಲಾಗಿತ್ತು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಸೈನಾ ನೆಹ್ವಾಲ್ ಗೆದ್ದ ಕಂಚು ಹಾಗೂ ನಂತರ ಭಾರತದ ಯುವ ಆಟಗಾರರಿಂದ ಮೂಡಿಬಂದ ಪದಕ, ಪ್ರಶಸ್ತಿಗಳ ಸಾಧನೆ ನಮ್ಮ ದೇಶದ ಹೆಸರನ್ನು ವಿಶ್ವ ಬ್ಯಾಡ್ಮಿಂಟನ್ ವಲಯ ಕಣ್ಣರಳಿಸಿಕೊಂಡು ನೋಡುವಂತೆ ಮಾಡಿತು. ಇದಾದ ಬಳಿಕ ಲಕ್ಷ್ಯ ಸೇನ್ ಅವರಂಥ ಅನೇಕ ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದಾರೆ.

ಆದರೆ, ಲಕ್ಷ್ಯ ಸೇನ್ ಸ್ಥಿರ ಪ್ರದರ್ಶನ ಉಳಿಸಿಕೊಂಡು, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಮೇಲಿಂದ ಮೇಲೆ ಪದಕಗಳನ್ನು ಗೆಲ್ಲುತ್ತಿರುವುದು ವಿಶೇಷ. ಈಗ ಇಂಡಿಯಾ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ವೃತ್ತಿ ಜೀವನದ ಮೊದಲ ದೊಡ್ಡ ಪ್ರಶಸ್ತಿಯ ಒಡೆಯರಾಗಿದ್ದಾರೆ. ಪ್ರಕಾಶ ಪಡುಕೋಣೆ (1981) ಮತ್ತು ಕಿದಂಬಿ ಶ್ರೀಕಾಂತ್ (2015) ಅವರ ಬಳಿಕ ಇಂಡಿಯಾ ಓಪನ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೂರನೇ ಆಟಗಾರ ಎನ್ನುವ ಸಾಧನೆಗೆ ಪಾತ್ರರಾಗಿದ್ದಾರೆ.

ಮಹಿಳಾ ವಿಭಾಗದ ಸಿಂಗಲ್ಸ್‌ನಲ್ಲಿ ಸೈನಾ ನೆಹ್ವಾಲ್ (2010 ಹಾಗೂ 2015) ಮತ್ತು ಪಿ.ವಿ. ಸಿಂಧು (2017), ಮಿಶ್ರ ಡಬಲ್ಸ್‌ನಲ್ಲಿ ವಿ. ದಿಜು–ಜ್ವಾಲಾ ಗುಟ್ಟಾ (2010) ಚಾಂಪಿಯನ್ ಆಗಿದ್ದರು. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಇದೇ ವರ್ಷ ಪ್ರಶಸ್ತಿ ಪಡೆದು ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಇಂಡಿಯಾ ಓಪನ್ ಟೂರ್ನಿಯ ಫೈನಲ್‌ನಲ್ಲಿ ಲಕ್ಷ್ಯ ಸೇನ್ ಗೆಲುವು ಪಡೆದಿದ್ದು ಸಿಂಗಪುರದ ಲೊಹ್ ಕೀನ್ ಯಿವ್ ಎದುರು. ವಿಶ್ವ ಚಾಂಪಿಯನ್ ಲೊಹ್ ಕೀನ್ 2021ರಲ್ಲಿ 'ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್'ನಲ್ಲಿ ಪ್ರಶಸ್ತಿ ಜಯಿಸಿ ಈ ಸಾಧನೆ ಮಾಡಿದ ಸಿಂಗಪುರದ ಮೊದಲ ಆಟಗಾರ ಎನಿಸಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ದೇಶದ ಧ್ವಜದಾರಿಯಾಗಿದ್ದರು. ಇಂಥ ಬಲಿಷ್ಠ ಆಟಗಾರನ ಎದುರು ಪ್ರಶಸ್ತಿ ಪಡೆದಿದ್ದರಿಂದ ಲಕ್ಷ್ಯ ಸೇನ್ ಸಾಧನೆ ವಿಶೇಷ ಎನಿಸಿದೆ. ಜೊತೆಗೆ ಬ್ಯಾಡ್ಮಿಂಟನ್ ಕೋಟೆಯಲ್ಲಿ ಭಾರತದ ಹೆಜ್ಜೆಗಳು ಕೂಡ ಗಟ್ಟಿಗೊಳ್ಳತೊಡಗಿವೆ.

### ಬ್ಯಾಡ್ಮಿಂಟನ್ ಕುಟುಂಬದ ಕುಡಿ

ಉತ್ತರಾಖಂಡದ ಅಲ್ಮೋರಾದ ಲಕ್ಷ್ಯ ಸೇನ್ ಬ್ಯಾಡ್ಮಿಂಟನ್ ಕುಟುಂಬದ ಕುಡಿ. ಇವರ ತಂದೆ ಧೀರೇಂದ್ರ ಕೆ. ಸೇನ್ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ಬ್ಯಾಡ್ಮಿಂಟನ್ ಕೋಚ್ ಆಗಿದ್ದರು. ಸಹೋದರ ಚಿರಾಗ್ ಸೇನ್ ಅಂತರರಾಷ್ಟ್ರೀಯ ಮಟ್ಟದ ಬ್ಯಾಡ್ಮಿಂಟನ್ ಆಟಗಾರ.

ಅಂದೊಮ್ಮೆ ಚಿರಾಗ್ ಸೇನ್ 13 ವರ್ಷದ ಒಳಗಿನವರ ರಾಷ್ಟ್ರೀಯ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಅಣ್ಣನ ಸಾಧನೆಯಿಂದ ಪ್ರೇರಣೆಗೊಂಡ ಲಕ್ಷ್ಯ ಸೇನ್ ಬ್ಯಾಡ್ಮಿಂಟನ್ ಆಯ್ಕೆ ಮಾಡಿಕೊಂಡರು. ಮನೆಯೊಳಗಿದ್ದ ವಾತಾವರಣವೂ ಇದಕ್ಕೆ ಪೂರಕವಾಯಿತು.